ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ,

"೧೯೮೮ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿನೇ ತಿದ್ದುಪಡಿ) ವಿಧೇಯಕವನ್ನು" ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.

"೧೯೮೮ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿನೇ ತಿದ್ದುಪಡಿ) ವಿಧೇಯಕವನ್ನು" ಅಂಗೀಕರಿಸುವುದು.

ಪ್ರಸಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಗಮನ ಸೆಳೆಯುವ ಸೂಚನೆಗಳು

ಕುಶಾಲನಗರದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಕೊಡಗಿನವರಿಂದ ಬೇಡಿಕೆ ಇದ್ದಾಗ್ಯೂ ಹೊರ ರಾಜ್ಯದವರಿಗೆ ಪರವಾನಗಿ ನೀಡಿರುವುದರ ಬಗ್ಗೆ

ಶ್ರೀ ಡಿ.ಎ. ಚಿನ್ನಪ್ಪ (ಮಾನ್ಯ ಬಿ.ಎಸ್. ಯಡಿಯೂರಪ್ಪ ಹಾಗೂ ಕೆ.ಹೆಚ್. ಪಾಟೀಲ್‌ರವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಕುಶಾಲ ನಗರದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಕೊಡಗಿನವರಿಂದ ಬೇಡಿಕೆ ಇದ್ದಾಗ್ಯೂ ಸಹ ಹೊರ ರಾಜ್ಯದವರಿಗೆ ಪರವಾನಗಿಯನ್ನು ನೀಡಿರುವುದರ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಯವರ ಗಮನಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ವಿದ್ಯಾ ಸಚಿವರು).—ಮಾನ್ಯ ಅಧ್ಯಕ್ಷರೆ, ೧೯೮೩-೮೪ನೇ ಸಾಲಿನಿಂದ ೧೯೮೭-೮೮ನೇ ಸಾಲಿನವರೆಗೆ ಅಂದರೆ ಕಳೆದ ೫ ಶೈಕ್ಷಣಿಕ ವರ್ಷಗಳಲ್ಲಿ ಕೊಡಗು ಜಿಲ್ಲೆಯ ಯಾವುದೇ ಶಿಕ್ಷಣ ಸಂಸ್ಥೆ ಕುಶಾಲನಗರದಲ್ಲಿ ಹೊಸ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯಂತೆ ಸಂಬಂಧಿಸಿದ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿಲ್ಲ. ಆದುದರಿಂದ ಸ್ಥಳೀಯರಿಂದ ಸರ್ಕಾರದ ಮುಂದೆ ಯಾವುದೇ ಬೇಡಿಕೆ ಬಂದಿರುವುದಿಲ್ಲ. ಮಂಗಳೂರಿನಲ್ಲಿ ಬ್ಯಾಂಚ್ ಆಡಳಿತ ಕಛೇರಿಯಿರುವ ಕೇರಳದ ಮಲಂಕಾರ್ ಆರ್ಥೋಡಾಕ್ಸ್ ಚರ್ಚ್ ಎಜ್ಯುಕೇಷನ್ ಟ್ರಸ್ಟನವರು ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ಒಂದು ಹೊಸ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಮಂಗಳೂರು ವಿಶ್ವವಿದ್ಯಾನಿಯಕ್ಕೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೧೯೭೬ ರಂತೆ ಪ್ರಸ್ತಾವನೆ ಬಂದಿದ್ದು ಸದರೀ ಕಾಲೇಜನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಅಕ್ಯಾಡೆಮಿಕ್ ಕೌನ್ಸಿಲ್ ಹಾಗೂ ಸಿಂಡಿಕೇಟ್‌ಗಳು ಶಿಫಾರಸ್ಸು ಮಾಡಿವೆ. ಮಾರ್ಚ್ ೧೯೮೮ರಿಂದ ಎ.ಐ.ಸಿ.ಟಿ.ಇ. (ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್) ಕಾಯ್ದೆ ಜಾರಿಗೆ ಬಂದಿದ್ದು ಸದರೀ ಕಾಯ್ದೆಯಂತೆ ಯಾವುದೇ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸುವ ಮುನ್ನ ಎ.ಐ.ಸಿ.ಟಿ.ಇ.ಯ ಪೂರ್ವಾನುಮತಿ ಪಡೆಯಬೇಕಾಗಿದೆ. ಆದುದರಿಂದ ಕುಶಾಲನಗರದ ಈ ಪ್ರಸ್ತಾವಿತ ಕಾಲೇಜಿಗೆ ಸರ್ಕಾರ ದಿನಾಂಕ : ೨೬-೮-೧೯೮೮ರಲ್ಲಿ ಲೆಟರ್ ಆಫ್ ಇಂಟೆಂಟ್ ನೀಡಿ ಮೇಲ್ಕಂಡ ಕಾಯ್ದೆಯಂತೆ ಎ.ಐ.ಸಿ.ಟಿ.ಇ.ಯ ಅನುಮತಿ ಪಡೆಯಲು ಹಾಗೂ ಎ.ಐ.ಸಿ.ಟಿ.ಇ. ಮತ್ತು ವಿಶ್ವವಿದ್ಯಾನಿಲಯ ವಿಧಿಸುವ ಷರತ್ತುಗಳನ್ನು ಪೂರೈಸಲು ತಿಳಿಸಲಾಗಿದೆ. ಇದೇ ಪತ್ರದಲ್ಲಿ ಮೇಲ್ಕಂಡ ಅನುಮತಿ ಪಡೆದ ನಂತರ ಸರ್ಕಾರವು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆಯಂತೆ ಸಂಯೋಜನೆ ನೀಡುವ ವಿಷಯ ಪರಿಶೀಲಿಸುವುದೆಂದು ಮತ್ತು ಸದರೀ ಪತ್ರ ಕಾಲೇಜನ್ನು ಪ್ರಾರಂಭಿಸಲು ಪರವಾನಗಿ ಎಂದು ಭಾವಿಸಬಾರದೆಂದು ಸ್ಪಷ್ಟ ಪಡಿಸಲಾಗಿದೆ. ಹಾಗೂ ಕಾಲೇಜನ್ನು ಪ್ರಾರಂಭಿಸಬಾರದೆಂದು ಸ್ಪಷ್ಟವಾಗಿ ಆಡಳಿತ ಮಂಡಳಿಗೆ ಸೂಚನೆ ಕೊಡಲಾಗಿದೆ, ಈ ಸನ್ನಿವೇಶದಲ್ಲಿ

ಸರ್ಕಾರ ಸದರೀ ಕಾಲೇಜನ್ನು ಪ್ರಾರಂಭಿಸಲು ಅನುಮತಿಯನ್ನಾಗಲೀ ಆಥವಾ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆಯಂತೆ ಅಗತ್ಯವಾದ ಶಿಫಾರಸ್ಸನ್ನಾಗಲೀ ಇದುವರೆವಿಗೂ ನೀಡಿಲ್ಲ ವೆಂಬುದನ್ನು ಈ ಮೂಲಕ ಸ್ಪಷ್ಟ ಪಡಿಸಲಾಗಿದೆ.

† ಶ್ರೀ ಡಿ.ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ ಸರ್ಕಾರದ ನೀತಿ ನಿಯಮಾವಳಿ ಪ್ರಕಾರ ಇನ್ನು ಮುಂದೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಕೊಡುವುದಿಲ್ಲ ಎನ್ನುವ ತೀರ್ಮಾನ ವನ್ನು ಸರ್ಕಾರ ತೆಗೆದುಕೊಂಡಿಡೆ. ಈಗಾಗಲೇ ಸುಮಾರು ೪೬ ಇಂಜಿನಿಯರಿಂಗ್ ಕಾಲೇಜುಗಳು ಕರ್ನಾಟಕದಲ್ಲಿ ಇವೆ. ಸುಮಾರು ಎಂಟು ಸಾವಿರ ಜನ ಇಂಜಿನೀಯರ್ಸ್ ಇವತ್ತು ಅನ್ ಎಂಪ್ಲಾಯ್ಡ್ ಆಗಿದ್ದಾರೆ. ಹೀಗಿದ್ದರೂ ಒಂದೇ ದಿವಸದಲ್ಲಿ ಕ್ಯಾತೋಲಿಕ್ ಇಂಜಿನಿಯರಿಂಗ್ ಟೆಕ್ನಾಲಜಿ ಟ್ರಸ್ಟ್‌ಗೆ ಎಂಜಿನಿಯರಿಂಗ್ ಕಾಲೇಜನ್ನು ನಡೆಸಲು ಅನುಮತಿ ಕೊಟ್ಟ ದಿವಸವೇ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿ ಎನ್ನುವ ಇನ್ನೊಂದು ಸೊಸೈಟಿಗೆ ಬೆಂಗಳೂರಿನಲ್ಲಿ ಒಂದು ಕಾಲೇಜನ್ನು ನಡೆಸಲು ಅನುಮತಿ ಕೊಟ್ಟಿದ್ದಾರೆ. ಅವರ ಹೆಸರು ದೊರೆಸ್ವಾಮಿ ನಾಯ್ಡು ಎಂದು, ಅವರಿಗೆ ಕೊಟ್ಟಿದ್ದಾರೆ. ಇದನ್ನು ಕೊಡುವ ಅವಶ್ಯಕತೆ ಇರಲಿಲ್ಲ. ತಾವು ಕೊಡಗಿನಲ್ಲಿ ಒಂದು ಕಾಲೇಜು ಬೇಕು ಎನ್ನತಕ್ಕಂಥ ಒಂದು ವಿಷಯವನ್ನು ಹೇಳಿದ್ದರೆ ಕೊಡಗಿನಿಂದ ಅರ್ಜಿಗಳು ಬರುತ್ತಿತ್ತು. ಕೊಡಗಿನ ಕುಶಾಲನಗರ ಟೆಕ್ನಿಕಲ್ ಸೊಸೈಟಿಯವರು ರಿಜಿಸ್ಟರ್ ಮಾಡಿದ್ದರು. ಈ ಟ್ರಸ್ಟಿಗಿಂತಲೇ ಇಸವಿಯಲ್ಲಿ ರಿಜಿಸ್ಟರ್ ಆಗಿದೆ. ಆದರ ಪ್ರಕಾರವಾಗಿ ಈ ಟೆಕ್ನಿಕಲ್ ಸೊಸೈಟಿಯವರು ಕಾಲೇಜನ್ನು ಮಾಡುತ್ತೇವೆಂದು ಕೇಳಿದಾಗ ಇನ್ನು ಮುಂದೆ ಯಾವಿಗೂ ಇಂಜಿನಿಯರಿಂಗ್ ಕಾಲೇಜ್‌ಗಳನ್ನು ಕೊಡುವುದಿಲ್ಲವೆಂದು ಹೇಳಿದ್ದರಿಂದ ಅವರು ಅರ್ಜಿಯನ್ನು ಹಾಕಲಿಲ್ಲ. ಆದೇ ಪ್ರಕಾರ ವೆಂಕಟರಮಣ ಗೌಡ ಅಕಾಡೆಮಿಸ್ ಆಫ್ ಲಿಬರಲ್ ಎಜ್ಯುಕೇಷನ್. ಅವರು ಎರಡು ವರ್ಷಗಳ ಹಿಂದೆಯೇ ಇಂಜಿನಿಯರಿಂಗ್ ಕಾಲೇಜನ್ನು ಕೊಡಗಿನ ಕುಶಾಲನಗರದಲ್ಲಿ ತೆರೆಯುತ್ತೇವೆಂದು ಕೇಳಿದಾಗ, ಇನ್ನು ಮುಂದೆ ಮೆಡಿಕಲ್ ಕಾಲೇಜುಗಳನ್ನಾಗಲಿ, ಇಂಜಿನೀಯರಿಂಗ್ ಕಾಲೇಜುಗಳನ್ನಾಗಲಿ ಕೊಡುವುದಿಲ್ಲ ವೆಂದು ಹೇಳಿ ಅವರ ಅರ್ಜಿಯನ್ನು ವಜಾ ಮಾಡಿದರು. ಪರಿಸ್ಥಿತಿ ಹೀಗಿದ್ದರೂ ಕೂಡ ಯಾವ ರೀತಿ ಕಾಲೇಜನ್ನು ತೆರೆಯಲು ಸ್ಯಾಂಕ್ಷನ್ ಕೊಟ್ಟಿರುತ್ತಾರೆಂದು ಕೇಳಬೇಕಾಗಿದೆ. ಈ ಕೊಡಗಿನಲ್ಲಿ ಕಾಲೇಜನ್ನು ತೆಗೆಯಲು ಸ್ಯಾಂಕ್ಷನ್ ಕೊಟ್ಟಿರುವುದರಿಂದ ಪರಿಸ್ಥಿತಿ ವಿನಾಗಿದೆ ಎಂದರೆ ಕೊಡಗಿನ ಜನರಲ್ಲಿ ಒಂದು ರೀತಿಯ ಭೀತಿ, ಭಯ ಉಂಟಾಗಿದೆ. ಕೊಡಗಿನ ಜನರು ನಂಗೆ ಏಳುವ ಪ್ರಸಂಗ ಉಂಟಾಗಿದೆ. ಇವತ್ತು ಪತ್ರಿಕೆಯಲ್ಲಿ ಬಂದಿರುತ್ತದೆ. ಹಿಂದೆ ವಿದ್ಯಾ ಮಂತ್ರಿಗಳಾಗಿದ್ದ ಶ್ರೀಮಾನ್ ಜೀವರಾಜ ಆಳ್ವರವರು, ಮಾನ್ಯ ಎಂ.ಸಿ. ನಾನಯ್ಯನವರು ಇದರ ಬಗ್ಗೆ ಏನು ಅಭಿಪ್ರಾಯವನ್ನು ಹೊಂದಿರುತ್ತಾರೋ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಚಿನ್ನಪ್ಪನವರೇ, ತಾವು ನೇರವಾಗಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಡಿ.ಎ. ಚಿನ್ನಪ್ಪ.—ತಾವು ಇನ್ನು ಮುಂದೆ ಕೊಡುವುದಿದ್ದರೆ ಕೊಡಗಿನವರಿಗೇನೇ ಕಾಲೇಜನ್ನು ಕೊಡಬೇಕು. ಎನ್ನುವ ಪ್ರಶ್ನೆಯನ್ನು ನಾವು ಕೇಳುತ್ತಿದ್ದೇವೆ. ಒಂದು ವೇಳೆ ನೀವು ಅವರಿಗೇನೇ ಕಾಲೇಜನ್ನು ಕೊಡಲಿಕ್ಕೆ ತಯಾರಾಗಿದ್ದರೆ ೫೦ ಪರ್ಸೆಂಟ್ ಸೀಟ್‌ಗಳನ್ನು ಕೊಡಗಿನವರಿಗೆ ಕೊಡಬೇಕೆಂದು ಅವರಿಗೆ ಹೇಳುತ್ತೀರಾ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ. ?

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ). - ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಇಂಜಿನೀಯರಿಂಗ್ ಕಾಲೇಜನ್ನು ಕೊಡಗಿನ ಕುಶಾಲನಗರದಲ್ಲಿ ನಡೆಸಲು ಕೊಟ್ಟಾಯಂನಲ್ಲಿ ಹೆಡ್ ಕ್ವಾರ್ಟರ್ಸ್ ಇಟ್ಟುಕೊಂಡಿರುವ ಎಜ್ಯುಕೇಷನ್ ಸೊಸೈಟಿಯವರಿಗೆ ಕೊಟ್ಟಿದ್ದೀರಿ, ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಚಾರ ತರಬಯಸುತ್ತೇನೆ, ಏನೆಂದರೆ. ಈ ವಿಧಾನಸಭೆಯಲ್ಲಿರತಕ್ಕಂಥ ಅನೇಕ ಸದಸ್ಯರು ಅಂದರೆ ಕಾಂಗ್ರೆಸ್ ಪಾರ್ಟಿಯಲ್ಲಿರುವವರೇ ಇದಕ್ಕೆ ವಿರೋಧ ಮಾಡಿದ್ದಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರೂ ವಿರೋಧ ಮಾಡಿದ್ದಾರೆ. ಮಂಡಲ್ ಪಂಚಾಯತ್ ಅಧ್ಯಕ್ಷರೂ ಕೂಡ ವಿರೋಧ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು.— ನೀವು ಪಾರ್ಟಿಯ ಹೆಸರನ್ನು ಏತಕ್ಕೆ ಹೇಳಬೇಕು ? ನೀವು ಹೇಳಬಾರದು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಕಾಂಗ್ರೆಸ್ ಪಾರ್ಟಿಯವರು ವಿರೋಧ ಮಾಡಿದ್ದಾರೆಂದು ಹೇಳಿದರೆ ತಪ್ಪೇ ?

(ಗೊಂದಲ)

ಅಧ್ಯಕ್ಷರು.— ಪಾರ್ಟಿ ವಿಷಯ ಇಲ್ಲಿ ತೆಗೆದುಕೊಳ್ಳಬಾರದು. ನೀವು ಪಾರ್ಟಿ ಹೆಸರು ತೆಗೆದು ಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ. ಬಿ. ಎಸ್ ಯಡಿಯೂರಪ್ಪ — ಹಾಗಿದ್ದರೆ ಇದೇನು ಪ್ರಾಥಮಿಕ ಶಾಲೆಯೇ ? ಹೇಗೆ ಮಾತನಾಡಬೇಕೆಂದು ನನಗೆ ಗೊತ್ತಿದೆ. ಯಾರನ್ನು ಕೇಳಿ ನಾನು ಮಾತನಾಡಬೇಕಿಲ್ಲ.

ಅಧ್ಯಕ್ಷರು.— ನಿಮಗೆ ಏನು ಬೇಕು ಎಂಬ ಬಗ್ಗೆ ಸರ್ಕಾರಕ್ಕೆ ನೇರವಾಗಿ ಕೇಳಿ.

ಶ್ರೀ ಕೆ. ಹೆಚ್ ಶ್ರೀನಿವಾಸ್.— ಒಂದೊಂದು ಸಂದರ್ಭದಲ್ಲಿ ನಿಮ್ಮ ಪಕ್ಷ ಇರಬಹುದು ಅಥವಾ ಜನತಾ ಪಕ್ಷ ಇರಬಹುದು ಅಥವಾ ಕಾಂಗ್ರೆಸ್ ಪಕ್ಷ ಇರಬಹುದು. ಇದೇನು ಪಾಲಿಸಿ ಮ್ಯಾಟರ್ ಅಲ್ಲ. ಫೀಲಿಂಗ್ಸ್ ಡಿವೈಡ್ ಆಗುವುದಕ್ಕೆ ಸಾಧ್ಯತೆ ಇದೆ. ಇಡೀ ಪಕ್ಷವೇ ನಿರ್ಧಾರ ತೆಗೆದುಕೊಳ್ಳಬೇಕಾದ ವಿಚಾರವಾದರೆ ತೆಗೆದುಕೊಳ್ಳಬಹುದು. ಇಲ್ಲದಿದ್ದರೆ ಅದು ಅವರವರ ಪಾಲಿಗೆ ಬಿಟ್ಟದ್ದು. ಇನ್ನತ್ತ ಪ್ರಶ್ನೆ ಏನೆಂದರೆ, ಕಾಂಗ್ರೆಸ್‌ನಲ್ಲಿ ಹೌದು ಹೌದು ಎಂಬ ಅಭಿಪ್ರಾಯ ಇರತಕ್ಕವರು ಇರುವುದು. ಇನ್ನತ್ತ ಅಲ್ಲಿ ಯಾವುದೋ ಸೊಸೈಟಿಗೆ ಇಂಜಿನಿಯರಿಂಗ್ ಕಾಲೇಜ್ ಕೊಟ್ಟಾಗ ಅಭಿಪ್ರಾಯ ಭೇದ ಬಂದಿರಬಹುದು, ಅದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ಇದೆ ನೀವು ಏತಕ್ಕೆ ಬೇಜಾರು ಮಾಡಿ ಕೊಳ್ಳಬೇಕು ?

ಶ್ರೀ ಎಂ. ಚಂದ್ರಶೇಖರ್.— ಚಿನ್ನಪ್ಪನವರು ಯಾರು ? ಅವರೂ ವಿರೋಧ ಮಾಡಿಲ್ಲವೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.— ಪಕ್ಷದ ಹೆಸರು ಇಲ್ಲಿ ತರಬೇಡಿ ಅಂದರೆ ನನಗೆ ಅರ್ಥವಾಗುವುದಿಲ್ಲ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.— ಅಲ್ಲಿ ಜನರನ್ನು ಹಿಡಿದು ಹೊಡೆಯುತ್ತಿದ್ದಾರೆ, ಹಲ್ಲೆ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಚಿನ್ನಪ್ಪನವರ ಇಚ್ಛೆ ಅದು ಆಗಬಾರದು ಎಂದು ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ. - ಯಡಿಯೂರಪ್ಪನವರು ಬೇಕಾದಷ್ಟು ಹೇಳಲಿ ಆಡ್ಡಿ ಯಿಲ್ಲ. ಆದರೆ ಕಾಂಗ್ರೆಸ್ಸಿನ ಎಲ್ಲಾ ಸದಸ್ಯರು ವಿರೋಧ ಮಾಡಿದ್ದಾರೆಂದು ಅವರು ಹೇಳುವುದು ಸರಿಯಲ್ಲ. ಅವರೇ ಇದನ್ನು ಎತ್ತಿದ್ದಾರೆ.

ಶ್ರೀ ಬಿ. ಎಸ್ ಯಡಿಯೂರಪ್ಪ.— ನಾನು ಹೇಳಬೇಕಾದುದು ಇಷ್ಟೆ ಈ ಬಗ್ಗೆ ಳ ಅರ್ಜಿಗಳ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಬಂದಿದ್ದವು. ಮಂಗಳೂರು ವಿಶ್ವವಿದ್ಯಾನಿಲಯದವರು ಎಕ್ಸ್‌ಪರ್ಟ್ಸ್ ಕಮಿಟಿಯ ಅಭಿಪ್ರಾಯವನ್ನು ಕೇಳಿದರು. ಎಕ್ಸ್‌ಪರ್ಟ್ಸ್ ಕಮಿಟಿಯವರು ಳ ಕಾಲೇಜು ಗಳಿಗೆ ಅವಕಾಶ ಇಲ್ಲ, ಮಂಜೂರು ಮಾಡಬಾರದೆಂದು ಹೇಳಿದರು. ಅಲ್ಲಿರತಕ್ಕ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಕೂಡ ಬೇಡ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.— ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಯಾರು ?

ಶ್ರೀ ಬಿ ಎಸ್. ಯಡಿಯೂರಪ್ಪ.— ನಾನು ಹೆಸರು ಹೇಳಿದರೆ ತಪ್ಪು ತಿಳಿದುಕೊಳ್ಳುತ್ತಾರೆ. ಕುಶಾಲನಗರದಲ್ಲಿ ವಿರೋಧಿ ಕ್ರಿಯಾ ಸಮಿತಿ ಎಂದು ಮಾಡಲಾಗಿದೆ. ಅಲ್ಲಿ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸುವುದಕ್ಕೆ ಅಲ್ಲಿರುವವರಿಗೆ ಇಷ್ಟವಿಲ್ಲ. ದೊಡ್ಡ ಗಲಾಟೆಯಾಗುವ ಸಂದರ್ಭ ಬರುತ್ತಿದೆ. ಅದಕ್ಕೋಸ್ಕರ ನಾನು ವಿದ್ಯಾ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಅಲ್ಲಿರುವ ವೈಸ್ ಚಾನ್ಸಲರ ಕೈವಾಡ ಇದರ ಹಿನ್ನೆಲೆಯಲ್ಲಿ ಇದೆ ಏತಕ್ಕೆಂದರೆ ಎಕ್ಸ್‌ಪರ್ಟ್ಸ್ ಕಮಿಟಿಯವರು ಳ ಕಾಲೇಜುಗಳಿಗೆ ಅನುಮತಿ ಕೊಡಬಾರದೆಂದು ಹೇಳಿದ ಮೇಲೆ ಹೇಗೆ ಇವರು ಧೈರ್ಯ ಮಾಡಿ ಕೊಡುತ್ತಾರೆ ? ಇಷ್ಟೆಲ್ಲ ವಿರೋಧ ಇದ್ದು ದೊಡ್ಡ ಗಲಾಟೆಗೆ ಅವಕಾಶ ಮಾಡಿಕೊಡಲಾಗುತ್ತಿದೆ. ಕೊಡಗು ಜಿಲ್ಲೆಯ ಕುಶಾಲನಗರದ ಜನರು ಪ್ರತಿಭಟನೆ

ಮಾಡುತ್ತಿರುವುದರಿಂದ ಕಾಲೇಜು ಮಂಜೂರಾತಿಯನ್ನು ಕ್ಯಾನ್ಸಲ್ ಮಾಡಬೇಕು ಲೆಟರ್ ಆಫ್ ಇಂಟೆಂಟ್ ಅನ್ನು ಸದನದ ಮುಂದಿಡಿ. ಜಾಗ ಮಂಜೂರಾಗಿರುವವರ ಹೆಸರಿಗೆ ಖಾತೆ ಆಗಿಲ್ಲ. ಯಾರಿಗೂ ಬೇಡದ ಕೆಲಸ ಮಾಡಿ ಶಾಂತ ವಾತಾವರಣಕ್ಕೆ ಬೆಂಕಿ ಹಚ್ಚಿದಂತಾಗುತ್ತದೆ. ಕೊಡಗು ಜಿಲ್ಲೆಯ ಜನ ಧರಣಿ ಕುಳಿತಿದ್ದಾರೆ. ದಯವಿಟ್ಟು ಈ ಕಾಲೇಜಿಗೆ ಮಂಜೂರಾತಿ ಕೊಡಬೇಡಿ ಎಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್. — ಮಾನ್ಯ ಅಧ್ಯಕ್ಷರೆ, ನನ್ನ ಹೇಳಿಕೆಯಲ್ಲಿ ಪೂರ್ಣವಾಗಿ ಸರ್ಕಾರ ಏನು ಮಾಡಿದೆ ಅಂತ ಹೇಳಿದ್ದೇನೆ. ಅವರಿಗೆ ಪ್ರಾರಂಭ ಮಾಡಿ ಎಂದು ಪರವಾನಗಿಯನ್ನು ಕೊಟ್ಟಿಲ್ಲ. ಅವರು ಆಲ್ ಇಂಡಿಯಾ ಟೆಕ್ನಿಕಲ್ ಕೌನ್ಸಿಲ್‌ನವರಿಂದ ಒಪ್ಪಿಗೆಯನ್ನು ತರಬೇಕು ಅಂತ ಹೇಳಿದ್ದೇವೆ. ನಂತರ ವಿಶ್ವವಿದ್ಯಾನಿಲಯದ ಅಫಿಲಿಯೇಷನ್ ತೆಗೆದುಕೊಳ್ಳಬೇಕು ಅಂತಹೇಳಿದ್ದೇವೆ. ಇವೆರಡನ್ನೂ ತೆಗೆದುಕೊಳ್ಳದ ಹೊರತು, ಪ್ರಾರಂಭ ಮಾಡಬಾರದು ಅಂತ ಸೂಚನೆಯನ್ನು ಕೊಟ್ಟಿದ್ದೇವೆ. ಆದರೆ ಅವರು ಸ್ಥಳೀಯವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ತೆಗೆದುಕೊಳುತ್ತೇವೆ ಅಂತ ಅವರು ಏನಾದರೂ ಪ್ರಚಾರ ಮಾಡಿದ್ದರೆ. ಆದಕ್ಕೆ ಈ ಮನೆಗಳಲ್ಲಿ,ಹಾಗೂ ಸಾರ್ವಜನಿಕವಾಗಿ ಪ್ರಶಿಭಟನೆ ಆಗಿದ್ದರೂ ಸಹ ಅಲ್ಲಿಗೂ ನಾವು ಅಲ್ಲಿಗೆ ಸೇರುವುದಕ್ಕೆ ತಯಾರಾಗಿದ್ದೇವೆ ಅಂತ ಹೇಳುವುದಾದರೆ, ಅದು ಆ ವಿದ್ಯಾರ್ಥಿಗಳಿಗೆ ಹಾಗೂ ಆ ಸಂಸ್ಥೆಯವರಿಗೆ ಸೇರಿದ್ದೇ ಹೊರತು ಅದರ ಜವಾಬ್ದಾರಿ ಸರ್ಕಾರಕ್ಕಾಗಲೀ ಇಲಾಖೆಗಾಗಲಿ ಸೇರಿದ್ದಲ್ಲ. ಒಟ್ಟಿನಲ್ಲಿ ಎರಡು ತರಹದ ಅಭಿಪ್ರಾಯಗಳು ಬರುತ್ತಿವೆ. ಆ ಜಿಲ್ಲೆಯಲ್ಲಿ ಯಾವುದೇ ಇಂಜಿನೀಯರಿಂಗ್ ಕಾಲೇಜುಗಳಲ್ಲಿ, ಅನೇಕ ಜಿಲ್ಲೆಗಳವರು ಕಾಲೇಜುಗಳು ಬೇಕೆಂದು ಒತ್ತಾಯ ಮಾಡಿಕೊಂಡು ತೆಗೆದುಕೊಂಡಿದ್ದು ಉಂಟು. ಇದರಲ್ಲಿ ಸ್ಥಳೀಯವಾಗಿ ಯಾರದೇ ಆರ್ಜಿ ಇರಲಿಲ್ಲ, ಮಂಗಳೂರು ಜಿಲ್ಲೆಯಲ್ಲಿ ಇದರ ಬ್ರಾಂಚ್ ಇದೆ ಅವರ ಸ್ವಂತ ಊರಾಂ ಕೊಟ್ಟಾಯಂ ಇರಬಹುದು. ಅಲ್ಲಿ ಅವರದ್ದೂ ಒಂದು ಬ್ರಾಂಚ್ ಇದೆ. ಅವರು ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದಾಗ, ಮಾನ್ಯ ಸದಸ್ಯರು ಹೇಳಿದ ಹಾಗೆ ಆ ವಿಶ್ವವಿದ್ಯಾನಿಲಯದ ಸಮಿತಿಯವರು ರಿಜೆಕ್ಟ್ ಮಾಡಿದರು ಆದರೆ ಅದನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ಅಪ್ರೂವ್ ಮಾಡಿದ್ದಾರೆ ವಿ. ಸಿ. ಯವರು ವೈಯಕ್ತಿಕವಾಗಿ ಮಾಡಿರುವುದಕ್ಕಾಗುವುದಿಲ್ಲ, ಸಿಂಡಿಕೇಟೇ ಅದಕ್ಕೆ ಒಪ್ಪಿಗೆ ಕೊಟ್ಟಿದೆ ಆದರೆ ಸರ್ಕಾರ ಅವರನ್ನು ಪ್ರಾರಂಭ ಮಾಡಿ ಅಂತ ಹೇಳಿಲ್ಲ, ಅದಕ್ಕೆ ಅವಕಾಶವನ್ನೂ ಮಾಡಿಕೊಟ್ಟಿಲ್ಲ. ಮೊದಲು ಆಲ್ ಇಂಡಿಯಾ ಟೆಕ್ನಿಕಲ್ ಕೌನ್ಸಿಲ್‌ನವರ ಪರವಾನಗಿಯನ್ನು ತೆಗೆದುಕೊಂಡು ಬನ್ನಿ ಆಮೇಲೆ ಕೇಳಿ, ಯೋಚನೆ ಮಾಡುತ್ತೇವೆ ಅಂತ ಹೇಳಿದ್ದೇವೆ. ಈ ಮಾಧ್ಯ ಸಾರ್ವಜನಿಕರ ಒತ್ತಡ ವಿರೋಧಗಳು ಇವೆಲ್ಲಾ ಇವೆ. ಈ ಮನೆಯಲ್ಲಿ ಹಾಗೂ ಮೇಲ್ಮನೆಯಲ್ಲಿ ಎರೆಡೂ ಕಡೆ ಎಲ್ಲ ಪಕ್ಷದ ಸದಸ್ಯರು ಇದರ ಬಗ್ಗೆ ವಿರೋಧ ಅಭಿಪ್ರಾಯವನ್ನು ಸೂಚನೆ ಮಾಡಿದ್ದಾರೆ ಅಲ್ಲಿ ಕಾಲೇಜು ಆಗಬಾರದು ಅಂತ ಸೂಚಿಸಿದ್ದಾರೆ. ಸ್ಥಳೀಯವಾಗಿಯೂ ಇದರ ವಿರುದ್ಧ ಪ್ರತಿಭಟನೆಗಳು ಆಗುತ್ತಿವೆ ಎಂಬುದಾಗಿ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಸರ್ಕಾರ ಮಾತ್ರ ಇದುವರೆವಿಗೂ ಅ ರಿಗೆ ಪ್ರಾರಂಭ ಮಾಡಿ ಅಂತ ಯಾವುದೇ ಆದೇಶವನ್ನು ಕೊಟ್ಟಿಲ್ಲ. ಇಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ಬಡವರ ಬಗ್ಗೆ ಸರ್ಕಾರ ಸಂಗ್ರಿವಾಜ್ಞೆ ಹೊರಡಿಸುವಲ್ಲಿ ವಿಳಂಬ ಮಾಡಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ. — ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ಬಡವರ ಬಗ್ಗೆ ಸರ್ಕಾರ ಸಂಗ್ರಿವಾಜ್ಞೆ ಹೊರಡಿಸುವಲ್ಲಿ ವಿಳಂಬ ಮಾಡಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೃಷ್ಣ (ರೇಷ್ಮೆ ಮತ್ತು ಪಶುಸಂಗೋಪನೆಮಂತ್ರಿ)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) — ಅಧ್ಯಕ್ಷರೇ ಇಡೀ ರಾಜ್ಯದಲ್ಲಿ ಸುಮಾರು ೪ ೫೨ ಲಕ್ಷ ಎಕರೆ ಸರ್ಕಾರಿ ಜಮೀನನ್ನು ರೈತರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದು ಕಂಡು ಬಂದಿದೆ. ಸರ್ಕಾರ ಈ ರೀತಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಪ್ರದೇಶವನ್ನು ಸಕ್ರಿಯಗೊಳಿಸಲು ತಾತ್ಕಾಲಿಕ ತೀರ್ಮಾನ ತೆಗೆದುಕೊಂಡು, ಕರ್ನಾಟಕ ಭೂ ಕಾಯಿದೆ ಕಲಂ ೯೪ ಕ್ಕೆ ತಿದ್ದುಪಡಿ ಹಾಗೂ ಹೊಸ ಕಲಂ ೯೪–ಎ ಯಾಯಿದೆಗೆ ಅಳವಡಿಸಲು